# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

(ಮೇರಿ ಲೂಯಿಸ್ ಬರ್ಕ್ ಅವರ Swami Vivekananda in the West - New Discoveries ಗ್ರಂಥದ ಆಧಾರಿತ)

**ಸ್ವಾಮಿ ವೀರೇಶಾನಂದ**

## ಭಾಗ ೪

### ಶಿಕಾಗೋದಲ್ಲಿ ಸ್ವಾಮೀಜಿ


ಸ್ವಾಮೀಜಿ ಸರಗೋಟಾದಿಂದ ಶಿಕಾಗೋ ನಗರಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿ, ೧೮೯೩ರ ಸೆಪ್ಟೆಂಬರ್ ೮, ಶುಕ್ರವಾರ ಅಥವಾ ಸೆಪ್ಟೆಂಬರ್ ೯, ಶನಿವಾರ ಸಂಜೆ ಅಲ್ಲಿನ ಸುಂದರವಾದ ಕೆಂಪು ಇಟ್ಟಿಗೆಗಳ ಕಟ್ಟಡವಿರುವ ಡಿಯರ್‌ಬಾರ್ನ್ ರಸ್ತೆಯ ರೈಲುನಿಲ್ದಾಣವನ್ನು ತಲುಪಿದರು. ಇಲ್ಲಿಂದಲೇ ಅವರು ಮೂರು ವಾರಗಳ ಹಿಂದೆ ಶಿಕಾಗೋ ನಗರದಿಂದ ತೆರಳಿದ್ದರು.

ಸ್ವಾಮೀಜಿ ಅಮೆರಿಕೆಗೆ ಬರುವ ಸಮಯದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಆದರೆ ಈಗ ಅವರು ಎಷ್ಟೋ ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಮುಂಬರುವ ಸರ್ವಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದಾರೆ. ಭಗವಂತನ ರಕ್ಷಣೆ ಮತ್ತು ಮಾರ್ಗದರ್ಶಗಳು ತಮಗೆ ಸಿಕ್ಕಿವೆ ಎಂದು ಹರ್ಷಚಿತ್ತರಾಗಿದ್ದಾರೆ. ಆದರೆ ಅವರು ಇನ್ನೊಂದು ತೊಂದರೆಯನ್ನು ಅನುಭವಿಸಬೇಕಾಯಿತು. ಅವರು ತಾವು ಹೋಗಬೇಕಾದ ಸ್ಥಳದ ವಿಳಾಸವನ್ನು ಕಳೆದುಕೊಂಡಿದ್ದರು. ಹೀಗಾಗಿ ಎಲ್ಲಿಗೆ ಹೋಗಬೇಕು ಎನ್ನುವುದು ಕೂಡ ಅವರಿಗೆ ಗೊತ್ತಿರಲಿಲ್ಲ. ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯನ್ನು ಅಧ್ಯಯನ ಮಾಡಿರುವವರು ಇದರ ಬಗ್ಗೆ ತಿಳಿದುಕೊಂಡಿರುತ್ತಾರೆ.

ಸ್ವಾಮೀಜಿ ಏಕಾಂಗಿಯಾಗಿದ್ದರು. ಅಮೆರಿಕದ ದೊಡ್ಡದೊಂದು ನಗರದಲ್ಲಿ ಅಪರಿಚಿತರಾಗಿದ್ದರು. ಈ ವಿಷಮ ಸಂದರ್ಭದಲಿ ಅವರು ತಮ್ಮ ನಿಜಸ್ವಭಾವವಾದ ಸಂನ್ಯಾಸಧರ್ಮವನ್ನು ಅಪ್ಪಿಕೊಂಡರು. 'ಗಗನವೇ ಮನೆ, ಹಸಿರೆ ಹಾಸುಗೆ' ಎಂದು ಅವರೇ ಮುಂದೆ ತಮ್ಮ ಸಂನ್ಯಾಸಿಗೀತೆಯನ್ನು ಹೇಳಿದ್ದಾರಲ್ಲವೆ? ರೈಲ್ವೇ ನಿಲ್ದಾಣದಲ್ಲಿ ಒಂದು ಖಾಲಿಯಾಗಿರುವ ಗೂಡ್ಸ್ ವ್ಯಾಗನ್ ನಿಂತಿತ್ತು. ಅಮೆರಿಕೆಯಲ್ಲಿ ಅದನ್ನು ಬಾಕ್ಸ್ ಕಾರ್ ಎನ್ನುತ್ತಾರೆ. ಅದರಲ್ಲಿಯೇ ಮಲಗಿ ಸ್ವಾಮೀಜಿ ಇಡೀ ರಾತ್ರಿಯನ್ನು ಕಳೆದರು. ಆದರೆ ಹಲವಾರು ಚಿತ್ರಪುಸ್ತಕಗಳಲ್ಲಿ ಸ್ವಾಮೀಜಿ ದೊಡ್ಡದೊಂದು ಡಬ್ಬಿಯ ಒಳಗೆ ಮಲಗಿರುವಂತೆ ತೋರಿಸುತ್ತಾರೆ. ಬಾಕ್ಸ್ ಕಾರ್ ಅನ್ನುವುದನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವುದೇ ಇದಕ್ಕೆ ಕಾರಣ.

ಬೆಳಗ್ಗೆಯಾಯಿತು. ಸ್ವಾಮೀಜಿ ಹಸಿವಿನಿಂದ ಬಳಲಿದ್ದಾರೆ. ಎಲ್ಲಿಗೆ ಹೋಗುವುದು? ಯಾರನ್ನು ಕೇಳುವುದು? ಮತ್ತೆ ಸಂನ್ಯಾಸಧರ್ಮವನ್ನೇ ಅವರು ಅಪ್ಪಿಕೊಂಡರು. ಮನೆಮನೆಗೆ ಹೋಗಿ ಬಾಗಿಲುಗಳನ್ನು ತಟ್ಟಿ ಭಿಕ್ಷೆ ಬೇಡಲು ಆರಂಭಿಸಿದರು. ಅವರ ವಿಚಿತ್ರವಾದ ಕಾಷಾಯ ವಸ್ತ್ರ ಮತ್ತು ಅದಕ್ಕಿಂತ ವಿಚಿತ್ರವಾದ ರುಮಾಲು – ಇವುಗಳನ್ನು ನೋಡಿ ಯಾರು ತಾನೇ ಸ್ವಾಮೀಜಿಯನ್ನು ತಮ್ಮ ಮನೆಯೊಳಗೆ ಬಿಟ್ಟುಕೊಟ್ಟಾರು? ಅವರನ್ನು ನೋಡಿದ ಒಡನೆಯೇ ಎಲ್ಲರೂ ಬಾಗಿಲುಗಳನ್ನು ಮುಚ್ಚಿದರು. ಅವರ ಮುಖಕ್ಕೇ ತಮ್ಮ ಮನೆಯ ಬಾಗಿಲುಗಳನ್ನು ಜಡಿದರು ಎಂದೇ ಹೇಳಬೇಕು. ಇದಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿದರು ಕೂಡ.

ಹೀಗೆ ಸ್ವಾಮಿ ವಿವೇಕಾನಂದರು ಶಿಕಾಗೋ ನಗರದ ಬೀದಿ ಬೀದಿಗಳಲ್ಲಿ ಸುಮಾರು ಎರಡೂವರೆ ಮೈಲುಗಳಷ್ಟು ದೂರವನ್ನು ಕ್ರಮಿಸಿದರು. ಅವರಿಗೆ ಯಾರೂ ಹಿಡಿಯಷ್ಟು ಅನ್ನವನ್ನೂ ನೀಡಲಿಲ್ಲ; ಸ್ವಲ್ಪವೂ ಕರುಣೆಯಿಂದ ಮಾತನಾಡಿಸಲಿಲ್ಲ. ಸ್ವಾಮೀಜಿ ಬಳಲಿದ್ದರು; ಹಸಿವೆಯಿಂದ ಕ್ಲಾಂತರಾಗಿದ್ದರು. ಕಡೆಗೆ ಡಿಯರ್ ಬಾರ್ನ್ ರಸ್ತೆಯ ಒಂದು ಬದಿಯಲ್ಲಿ ಸುಸ್ತಾಗಿ ಕುಳಿತುಬಿಟ್ಟರು. ಭಗವಂತನ ಇಚ್ಛೆಗೆ ಶರಣಾದರು. ಕೆಲವೇ ನಿಮಿಷಗಳಲ್ಲಿ ಮುಂದಿದ್ದ ಮನೆಯ ಮುಂಬಾಗಿಲು ತೆರೆಯಿತು. ಉತ್ತಮ ಪೋಷಾಕು ಧರಿಸಿರುವ ಪ್ರತಿಷ್ಠಿತ ಮಹಿಳೆಯೊಬ್ಬಳು ಮನೆಯಿಂದ ಹೊರಕ್ಕೆ ಬಂದಳು. ಅವಳೇ ಮಿಸೆಸ್ ಜಾರ್ಜ್ ಡಬ್ಲ್ಯು. ಹೇಲ್. ಆಕೆ ಅಪರಿಚಿತರಿಗೆ ಹೆದರುವಂಥ ಮಹಿಳೆಯಲ್ಲ, ಇದಲ್ಲದೆ ಪರೋಪಕಾರ ಗುಣವನ್ನು ಮೈಗೂಡಿಸಿಕೊಂಡಿದ್ದಳು. ವಿಚಿತ್ರವಾದ ಬಟ್ಟೆ ಬರೆಗಳನ್ನು ಧರಿಸಿರುವ ಈ ಯುವಕನ ಮುಖದಲ್ಲಿ ಹೊರಹೊಮ್ಮುತ್ತಿದ್ದ



ಹೇಲ್ ರೆಸಿಡೆನ್ಸಿ
ಡಿಯರ್ ಬಾರ್ನ್ ರಸ್ತೆ



ಮಿಸೆಸ್ ಜಾರ್ಜ್ ಡಬ್ಲ್ಯು ಹೇಲ್

ಪವಿತ್ರತೆ ಮತ್ತು ರಾಜಗಾಂಭೀರ್ಯವನ್ನು ಅವಳು ಗುರುತಿಸಲು ಶಕ್ತಳಾಗಿದ್ದಳು. ಹೀಗಾಗಿ ಸ್ವಾಮೀಜಿಯ ಹತ್ತಿರ ಬಂದು ಹೀಗೆ ನುಡಿದಳು: ''ಸರ್, ನೀವು ಸರ್ವಧರ್ಮ ಸಮ್ಮೇಳನದ ಪ್ರತಿನಿಧಿಗಳೇನು?'' ಹೌದೆಂದು ಹೊತ್ತಾಗುತ್ತಲೇ, ಅವಳು ತನ್ನ ಭವ್ಯವಾದ ಸೌಧದ ಒಳಗೆ ಅವರನ್ನು ಕರೆದುಕೊಂಡು ಹೋದಳು. ಅವರಿಗೆ ಒಳ್ಳೆಯ ಆತಿಥ್ಯವನ್ನು ನೀಡಿದಳು. ಅವರಿಗೆ ಬೇಕಾದುದನ್ನೆಲ್ಲ ಗಮನಿಸಿ ನೋಡಿಕೊಂಡಳು. ಇದಲ್ಲದೆ, ರೈಲ್ವೇ ನಿಲ್ದಾಣದಲ್ಲಿಯೇ ಬಿದ್ದಿದ್ದ ಸ್ವಾಮೀಜಿಯ ಸಾಮಾನು ಸರಂಜಾಮುಗಳನ್ನು ತರಲು ವ್ಯವಸ್ಥೆ ಮಾಡಿದಳು. ತದನಂತರ, ಸರ್ವಧರ್ಮ ಸಮ್ಮೇಳನದ ಕಛೇರಿಗೆ ಅವರನ್ನು ಕರದುಕೊಂಡು ಹೋದಳು. ಹೀಗೆ ಹೇಲ್ ಕುಟುಂಬ ವರ್ಗದವರು ಸ್ವಾಮೀಜಿಯನ್ನು ಆರೈಕೆ ಮಾಡಿದ್ದಷ್ಟೇ ಅಲ್ಲ, ಮೊದಲಿನಿಂದಲೂ ಅವರ ಅಮೆರಿಕದ ಕಾರ್ಯದಲ್ಲಿ ಬೆಂಗಾವಲಾಗಿ ನಿಂತಿದ್ದರು.

ಸೆಪ್ಟೆಂಬರ್ ೧೦, ೧೮೯೩ರಂದು ಸ್ವಾಮೀಜಿ ಸಮ್ಮೇಳನದ ಮುಖ್ಯ ಆಯೋಜಕರಾದ ಡಾ. ಜಾನ್ ಹೆಚ್. ಬರೋಸ್ ಅವರೊಡನೆ ಅವರ ಕಛೇರಿಯ ಮೊಗಸಾಲೆಯಲ್ಲಿ ಕುಳಿತಿರುವ ಛಾಯಾಚಿತ್ರವೊಂದು ಚಿಕಾಗೋ ರೆಕಾರ್ಡ್ ಪತ್ರಿಕೆಯ ಸೆಪ್ಟೆಂಬರ್ ೧೧ರ ಸಂಚಿಕೆಯಲ್ಲಿ ಮುದ್ರಿತವಾಯತು. ಈ ಪತ್ರಿಕೆಯಲ್ಲಿ ಸರ್ವಧರ್ಮ ಸಮ್ಮೇಳನದ ಅಧಿಕೃತ ಪ್ರತಿನಿಧಿಯಾಗಿರುವ ಸ್ವಾಮಿ ವಿವೇಕಾನಂದರ ಬಗೆಗಿನ ಮೊದಲ ಉಲ್ಲೇಖವನ್ನು ನಾವು ಕಾಣುತ್ತೇವೆ.

''ನಾಲ್ಕು ಧಾರ್ಮಿಕ ಮುಖಂಡರು ಡಾ. ಬರೋಸ್ ಅವರ ಕಛೇರಿಯ ಮೊಗಸಾಲೆಯಲ್ಲಿ ಕುಳಿತುಕೊಂಡಿದ್ದರು. ಅವರಲ್ಲಿ ವಿದ್ಯಾವಂತ ಹಿಂದೂ ಬ್ರಾಹ್ಮಣರಾದ ಸ್ವಾಮಿ ವಿವೇಕಾನಂದರೂ ಇದ್ದರು. ಇವರೆಲ್ಲರೂ ಒಂದೇ ಧರ್ಮಕ್ಕೆ ಸೇರಿದ ಸಹೋದರರಂತೆ ಮಾತುಕತೆ ನಡೆಸುತ್ತಿದ್ದರು. ಈ ಹಿಂದೂ ವ್ಯಕ್ತಿಯು ಸೌಮ್ಯ ವಾದ ಮುಖಭಾವವನ್ನು ಹೊಂದಿದ್ದನು. ಆತನ ತುಂಬಿಕೊಂಡಿದ್ದ ಮುಖವು ಬೆಳಗುತ್ತಿತ್ತು; ತೇಜಸ್ಸಿನಿಂದ ಕೂಡಿತ್ತು. ಆತನು ಕಿತ್ತಳೆ ಬಣ್ಣದ ಪೇಟವನ್ನೂ, ಹಾಗೆಯೇ ಅದೇ ಬಣ್ಣದ ಪೊಷಾಕನ್ನೂ ಧರಿಸಿದ್ದನು. ಆತನು ಬಹಳ ಉತ್ತಮವಾದ ಆಂಗ್ಲಭಾಷೆಯಲ್ಲಿ ಮಾತನಾಡುತ್ತಿದ್ದನು.''

ಸ್ವಾಮೀಜಿ ಬಹಳ ವಿನಯಭಾವದಿಂದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದರು. ಅದಕ್ಕಾಗಿ ಅಮೆರಿಕೆಯ ಜನತೆಗೆ ಧನ್ಯವಾದಗಳನ್ನು ಸಮರ್ಪಿಸಿದರು. ಆದರೆ ಅವರು ಮುಂದೆ ಕಲಿಯುವುದು ಬಹಳ ಇತ್ತು. ಮುಂದೆ ಬರುವ ಪರಿಸ್ಥಿತಿಯು ಅವರಿಗೆ ಶಿಕ್ಷಕನ ಸ್ಥಾನದಲ್ಲಿ ಇತ್ತು.

## ಸರ್ವಧರ್ಮ ಸಮ್ಮೇಳನದ ಪರಿಕಲ್ಪನೆ

೧೮೯೩ರಲ್ಲಿ ಶಿಕಾಗೋದಲ್ಲಿ ಜಾಗತಿಕ ಕೊಲಂಬಿಯನ್ ವಸ್ತುಪ್ರದರ್ಶನ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮಾನವನ ಭೌತಿಕ ಪ್ರಗತಿಯನ್ನು ಒಂದೇ ಸ್ಥಳದಲ್ಲಿ ಪ್ರಸ್ತುತಪಡಿಸುವುದೇ ಇದರ ಉದ್ದೇಶವಾಗಿತ್ತು. ಒಬ್ಬನು ಕಲ್ಪಿಸಿಕೊಳ್ಳಬಹುದಾದ ಎಲ್ಲವೂ ಇಲ್ಲಿ ಪ್ರದರ್ಶಿತವಾಗಿತ್ತು. ಪಾಶ್ಚಿಮಾತ್ಯ ಸಂಸ್ಕೃತಿಯ ಸಾಧನೆಗಳು ಮಾತ್ರವೇ ಅಲ್ಲ, ಜಗತ್ತಿನ ಸರಿಸುಮಾರು ಎಲ್ಲ ನಾಗರಿಕತೆಗಳ ಮಾದರಿಗಳನ್ನು ಕೂಡ ಇಲ್ಲಿ ಕಾಣಬಹುದಾಗಿತ್ತು. ಇದರ ಅಂಗವಾಗಿ, ಮಾನವ ಚಿಂತನೆಯ ಹಲವು ಆಯಾಮಗಳನ್ನು ವಿಚಾರಮಾಡುವುದೂ ಕೂಡ ಈ ಬೃಹತ್ ಮೇಳದ ಉದ್ದೇಶವಾಗಿತ್ತು. ಹಾಗೆಂದೇ ಶ್ರೀಯುತ ಬೋನಿ ಎನ್ನುವ ಒಬ್ಬ ವಕೀಲರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ ೩೦, ೧೮೯೦ರಂದು ಒಂದು ಸಮಿತಿಯನ್ನು ಆಯೋಜಿಸಲಾಯಿತು. ಅದರ ಅಡಿಯಲ್ಲಿ ಮಾನವ ಚಿಂತನೆಯ ಹಲವಾರು ವಿಷಯಗಳ ಬಗ್ಗೆ ಮೇ ೧೫, ೧೮೯೩ ರಿಂದ ಅಕ್ಟೋಬರ್ ೨೮, ೧೮೯೩ರವರೆಗೆ ಇಪ್ಪತ್ತು ಸಮ್ಮೇಳನಗಳನ್ನು ನಡೆಸಲಾಯಿತು. ಅವುಗಳಲ್ಲಿ ಮಹಿಳೆಯರ ಪ್ರಗತಿ, ಸಾರ್ವಜನಿಕ ವೃತ್ತಪತ್ರಿಕೆಗಳು, ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆ, ವಾಣಿಜ್ಯ ಮತ್ತು ಹಣಕಾಸು ಮುಂತಾದ ಹತ್ತುಹಲವು ಆಸಕ್ತಿಕರವಾದ ವಿಷಯಗಳು ಸೇರಿದ್ದವು. ಹೌಟನ್ ಎನ್ನುವವನು ಬರೆಯುತ್ತಾನೆ: ''ಈ ಸಮ್ಮೇಳನಗಳು ಎಷ್ಟೊಂದು ಸುದೀರ್ಘವಾಗಿದ್ದವೆಂದರೆ, ಅವುಗಳ ಕಾರ್ಯಕ್ರಮಪಟ್ಟಿಯೇ ೧೬೦ ಪುಟಗಳ ದೊಡ್ಡ ಪುಸ್ತಕವಾಗಿ ಪ್ರಕಟವಾಗಿತ್ತು.''

ಇವುಗಳಲ್ಲಿ ಧರ್ಮವೂ ಸೇರಿತ್ತು. ಏಕೆಂದರೆ, ಆಯೋಜಕರ ದೃಷ್ಟಿಯಲ್ಲಿ, ''ದಿವ್ಯಶಕ್ತಿಯಲ್ಲಿನ ನಂಬುಗೆಯಾದ ಧರ್ಮವು ಮಾನವ ಜೀವಿತಕ್ಕೆ ಸೂರ್ಯನಿದ್ದಂತೆ. ಅದು ಮಾನವನ ಬೌದ್ಧಿಕ ಮತ್ತು ನೈತಿಕ ಬೆಳವಣಿಗೆಗೆ ಬೆಳಕನ್ನು ನೀಡುತ್ತದೆ ಹಾಗೂ ಫಲದಾಯಕವಾದ ಸುಪ್ತಶಕ್ತಿಯಾಗಿದೆ.'' ಈ ಎಲ್ಲ ಸಮ್ಮೇಳನಗಳಲ್ಲಿ ಸರ್ವಧರ್ಮ ಸಮ್ಮೇಳನವು ಅತ್ಯಂತ ಪ್ರಸಿದ್ಧಿಯನ್ನು ಪಡೆಯಿತು. ಜಗತ್ತಿನಾದ್ಯಂತ ಜನರು ಇದಕ್ಕಾಗಿ ಕೌತುಕದಿಂದ ಪ್ರತೀಕ್ಷೆ ಮಾಡುತ್ತಿದ್ದರು. ರೆವರೆಂಡ್ ಜಾನ್ ಹೆನ್ರಿ ಬರೋಸ್ ಅವರು ತಮ್ಮ ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ: ''ಇನ್ನಾವುದೇ ಸಮ್ಮೇಳನಕ್ಕೂ ಕೂಡ ಜಗತ್ತಿನಾದ್ಯಂತ ಇಷ್ಟೊಂದು ಪ್ರಮಾಣದಲ್ಲಿ ನಿರೀಕ್ಷೆ ಇರಲಿಲ್ಲ.'' ಈ ಸಮ್ಮೇಳನವು ಜಾಗತಿಕ ಧಾರ್ಮಿಕ ಇತಿಹಾಸದಲ್ಲಿಯೇ ಅತ್ಯಂತ ವಿಶಿಷ್ಟವಾದ ಸಂದರ್ಭವಾಗಿತ್ತು. ಜಗತ್ತಿನ ಬೇರೆ ಬೇರೆ ಕಡೆ ಧಾರ್ಮಿಕ ಸಮ್ಮೇಳನಗಳು ನಡೆದಿರಬಹುದು. ಆದರೆ, ಜಗತ್ತಿನ ಎಲ್ಲ ಧರ್ಮಗಳ ಪ್ರತಿನಿಧಿಗಳನ್ನು ಒಂದೇ ವೇದಿಕೆಯಲ್ಲಿ ಕರೆದುಕೊಂಡುಬರುವ ಜಾಗತಿಕ ಪ್ರಯತ್ನವು ಇದೊಂದೇ ಆಗಿತ್ತು ಎನ್ನಬಹುದು. ಇದಕ್ಕೆ ಸರಿ

ಸಮನಾಗಿ ಹಿಂದೆ ಯಾವುದೇ ಧಾರ್ಮಿಕ ಸಮ್ಮೇಳನ ನಡೆದಿರಲಿಲ್ಲ. ಇದೊಂದು ಅತಿಮಾನುಷ ಪ್ರಯತ್ನವಾಗಿತ್ತು ಎಂದು ಹೇಳಿದರೆ ತಪ್ಪಿಲ್ಲ.

ಸ್ವಾಮೀಜಿ ಅಮೇರಿಕೆಗೆ ಬರುವ ಮೊದಲು ಸ್ವಾಮಿ ತುರೀಯಾನಂದರಿಗೆ ಹೇಳಿದ್ದರಂತೆ: ''ಸರ್ವಧರ್ಮ ಸಮ್ಮೇಳನವನ್ನು ಆಯೋಜಿಸಿರುವುದು ಇದಕ್ಕಾಗಿ (ತಮ್ಮ ಕಡೆ ತೋರಿಸುತ್ತ). ನನ್ನ ಮನಸ್ಸೇನೂ ಹಾಗೆ ಹೇಳುತ್ತಿದೆ. ಇದು ಸತ್ಯವೋ ಇಲ್ಲವೋ ಎನ್ನುವುದನ್ನು ಶೀಘ್ರವಾಗಿ ನೀನೇ ಕಂಡುಕೊಳ್ಳುವೆ.''

ಮೇಲುನೋಟಕ್ಕೆ ಸರ್ವಧರ್ಮ ಸಮ್ಮೇಳನದ ಉದ್ದೇಶ ಎಲ್ಲ ಧರ್ಮಗಳ ನಡುವೆ ಸಾಮರಸ್ಯವನ್ನು ಮೂಡಿಸುವುದೇ ಆಗಿದ್ದಿರಬಹುದು. ಆದರೆ ಅದನ್ನು ಆಯೋಜಿಸಿದ್ದ ನಿಜವಾದ ಲಕ್ಷ್ಯವೇ ಬೇರೆ ಎಂದು ಸ್ವಾಮಿ ವಿವೇಕಾನಂದರು ತಮ್ಮ ಪತ್ರಗಳಲ್ಲಿ ಬರೆಯುತ್ತಾರೆ: ''ಸರ್ವಧರ್ಮ ಸಮ್ಮೇಳನವನ್ನು ಆಯೋಜಿಸಿದ್ದು ಕ್ರೈಸ್ತಧರ್ಮದ ಹೆಚ್ಚುಗ್ಗಾರಿಕೆಯನ್ನು ಜಗತ್ತಿನ ಮುಂದೆ ಪ್ರಸ್ತುತ ಪಡಿಸುವುದಕ್ಕಾಗಿಯೇ ಇತ್ತು.'' ಸ್ವಾಮೀಜಿ ಈ ವಿಷಯದಲ್ಲಿ ಉತ್ಪ್ರೇಕ್ಷೆ ಮಾಡಿದ್ದಾರೆಯೋ ಎಂದು ನಮಗೆ ಅನ್ನಿಸಬಹುದು. ಆದರೆ ಇಂಥ ಬೃಹತ್ ಸಮ್ಮೇಳನವನ್ನು ಆಯೋಜಿಸಲು ಮಾಡಲಾದ ಸುದೀರ್ಘವಾದ ತಯಾರಿಗಳು ಮತ್ತು ಅದರ ಹಲವಾರು ಗೋಷ್ಠಿಗಳ ವಿವರಗಳು — ಇವನ್ನೆಲ್ಲ ಅಧ್ಯಯನ ಮಾಡಿದಾಗ, ಸರ್ವಧರ್ಮ ಸಮ್ಮೇಳನದ ತುಂಬೆಲ್ಲ ಕ್ರೈಸ್ತಧರ್ಮೀಯರ ಪೂರ್ವಾಗ್ರಹ ತುಂಬಿತುಳುಕುತ್ತಿತ್ತು ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಸರ್ವಧರ್ಮ ಸಮ್ಮೇಳನದಲ್ಲಿ ಉಳಿದ ಧರ್ಮಗಳ ನ್ಯೂನತೆಗಳು ಜಗಜ್ಜಾಹಿರಾಗುತ್ತವೆ; ಇದರಿಂದ ಕ್ರೈಸ್ತಧರ್ಮದ ಪರಮೋಚ್ಚತೆಯು ಜಾಗತಿಕವಾಗಿ ಸಾಬೀತಾಗುತ್ತದೆ ಎಂದೇ ಈ ಸಮ್ಮೇಳನದ ಆಯೋಜಕರ ದೃಢನಂಬಿಕೆಯಾಗಿತ್ತು.

ಆದರೆ ಆಯೋಜಕರಲ್ಲಿ ಉದಾರವಾದ ಮನಸುಳ್ಳವರೂ ಇದ್ದರು. ಅವರಲ್ಲಿ ಸಮ್ಮೇಳನ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀಯುತ ಬೋನಿಯವರೂ ಒಬ್ಬರು. ಅವರನ್ನು ಹೊಗಳುತ್ತ ಸ್ವಾಮೀಜಿ ತಮ್ಮ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: ''ಈ ಮಹತ್ತಾದ ಕಾರ್ಯದ ಆಲೋಚಿಸಿದ ಮತ್ತು ಅದನ್ನು ಅದ್ಭುತ ಯಶಸ್ಸಿನ ರೂಪದಲ್ಲಿ ಕಾರ್ಯರೂಪಕ್ಕೆ ತಂದ ಆ ಮನಸ್ಸಿನ ಬಗ್ಗೆ ಸ್ವಲ್ಪ ವಿಚಾರ ಮಾಡಿನೋಡಿರಿ. ಅವರೇನೂ ಧಾರ್ಮಿಕ ವ್ಯಕ್ತಿಯಾಗಿರಲಿಲ್ಲ. ಅವರೇ, ಎಲ್ಲ ಧಾರ್ಮಿಕ ಸಂಸ್ಥೆಗಳ ಗಣ್ಯವ್ಯಕ್ತಿಗಳ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದ, ಮಧುರ ಸ್ವಭಾವದ, ವಿದ್ಯಾವಂತರಾದ ಮತ್ತು ಸಹನಶೀಲರಾದ ಒಬ್ಬ ವಕೀಲರಾದ ಶ್ರೀಯುತ ಬೋನಿ ಅವರು.''

ಸರ್ವಧರ್ಮ ಸಮ್ಮೇಳನವು ಏನನ್ನು ಸಾಧಿಸುತ್ತದೆ ಎಂಬ ವಿಷಯದಲ್ಲಿ ಬೋನಿ ಅವರೇ ತಮ್ಮ ಕನಸನ್ನು ಹೀಗೆ ವ್ಯಕ್ತಪಡಿಸುತ್ತಾರೆ: ''ನಾನು ನನ್ನ ಯೌವನದಿಂದ ಜಗತ್ತಿನ ಮಹಾನ್ ಧಾರ್ಮಿಕ ಸಂಸ್ಥೆಗಳ ಜೊತೆಗೆ ಒಡನಾಡಿದ್ದೇನೆ. ನನ್ನ ಪ್ರಬುದ್ಧ ವಯಸ್ಸಿನಲ್ಲಿ ಅನೇಕ ಚರ್ಚುಗಳ ನೇತಾರರೊಂದಿಗೆ ಬಹಳ ನಿಕಟವಾದ ಸಹಯೋಗವನ್ನು ಕೂಡ ಇಟ್ಟುಕೊಂಡಿದ್ದೇನೆ. ಇದರಿಂದ ಒಂದು ನಂಬಿಕೆ ನನ್ನಲ್ಲಿ ದೃಢವಾಗಿ ಬೇರೂರಿದೆ. ಅದು ಹೀಗಿದೆ : ಜಗತ್ತಿನ ಮಹಾನ್ ಧಾರ್ಮಿಕ ಪಂಥಗಳನ್ನು ಒಟ್ಟಿಗೆ ಸೇರಿಸಲು ಮತ್ತು ಆ ಮೂಲಕ ಪರಸ್ಪರ ಸ್ನೇಹಪೂರ್ಣ ಸಂಭಾಷಣೆ ಸಾಧ್ಯವಾದರೆ, ಈ ಬಗೆಯ ಮಿಲನದ ಫಲವಾಗಿ, ಪರಸ್ಪರ ಸಹಾನುಭೂತಿಯ ಮತ್ತು ಒಮ್ಮತದ ಅನೇಕ ವಿಚಾರಗಳು ಹೊರಹೊಮ್ಮಬಹುದು. ಹೀಗೆ ಭವಿಷ್ಯದಲ್ಲಿ ಭಗವತ್ಪ್ರೇಮ ಮತ್ತು ಮಾನವಸೇವೆಗಳ ವಿಷಯದಲ್ಲಿ ಮಾನವ ಜನಾಂಗದ ಐಕ್ಯತೆ ಉಂಟಾಗಿ, ಇವೆರಡಕ್ಕೂ ಬಹಳ ಸಹಾಯಕವಾಗಬಹುದು ಮತ್ತು ಇವೆರಡೂ ಅಭಿವೃದ್ಧಿ ಹೊಂದಬಹುದು.''

ಸರ್ವಧರ್ಮ ಸಮ್ಮೇಳನದ ಸಮಿತಿಯು ಕೈಗೊಂಡ ಕಾರ್ಯವು ನಿಜಕ್ಕೂ ಬೃಹತ್ತಾಗಿತ್ತು. ೧೦,೦೦೦ಕ್ಕೂ ಹೆಚ್ಚು ಪತ್ರಗಳನ್ನು ಮತ್ತು ೪೦,೦೦೦ಕ್ಕೂ ಹೆಚ್ಚು ವಿವಿಧ ಕಾಗದಪತ್ರಗಳನ್ನು ಪ್ರಪಂಚದಾದ್ಯಂತ ಅಂಚೆಯ ಮೂಲಕ ಕಳುಹಿಸಿಕೊಡಲಾಯಿತು. ಇದಕ್ಕೆ ಉತ್ತರರೂಪವಾಗಿ ಬುಟ್ಟಿಗಟ್ಟಲೆ ಕಾಗದಪತ್ರಗಳನ್ನು ಸಮಿತಿಯು ಸ್ವೀಕರಿಸಿತು. ಈ ಬಗ್ಗೆ ಬರೋಸ್ ಬರೆಯುತ್ತಾರೆ: ''ಸುಮಾರು ಮೂವತ್ತು ತಿಂಗಳುಗಳ ಕಾಲ ಜಗತ್ತಿನಾದ್ಯಂತ ಎಲ್ಲ ರೈಲ್ವೆ ಮತ್ತು ಹಡಗುಮಾರ್ಗಗಳು ತಮಗೆ ಅರಿವಿಲ್ಲದೆಯೇ, ಸರ್ವಧರ್ಮ ಸಮ್ಮೇಳನದ ಸಲುವಾಗಿ ಕೆಲಸಮಾಡುತ್ತಿದ್ದವು. ಶಿಕಾಗೋ ನಗರದ ಅಂಚೆ ಕಛೇರಿಯ ಕೆಲಸಗಾರರು, ಮದ್ರಾಸ್, ಬಾಂಬೆ ಮತ್ತು ಟೋಕಿಯೋ ಮುಂತಾದ ನೂರಾರು ಸ್ಥಳಗಳಿಂದ ಬರುತ್ತಿದ್ದ ಸಾವಿರಾರು ಕಾಗದಪತ್ರಗಳ ಕಂತೆಗಳನ್ನು ವಿಲೇವಾರಿ ಮಾಡುತ್ತಿದ್ದರು.''

ಜಗತ್ತಿನಾದ್ಯಂತ ಈ ಜಾಗತಿಕ ಸಮ್ಮೇಳನಕ್ಕೆ ೩,೦೦೦ಕ್ಕೂ ಹೆಚ್ಚು ಸಲಹೆಗಾರರನ್ನು ನಿಯಮಿಸಿಕೊಳ್ಳಲಾಯಿತು. ಭಾರತದಿಂದ ಚೆನ್ನೈನ 'ಹಿಂದೂ' ಪತ್ರಿಕೆಯ ಸಂಪಾದಕರಾಗಿದ್ದ ಜಿ.ಎಸ್. ಅಯ್ಯರ್, ಮುಂಬೈ ನಗರದ ಬಿ.ಬಿ. ನಗರಕರ್, ಕೊಲ್ಕತಾದ ಪಿ.ಸಿ. ಮಜುಂದಾರ್ ಸೇರಿದ್ದರು. ಇವರಲ್ಲಿ ಕಡೆಯ ಇಬ್ಬರು ಗಣ್ಯವ್ಯಕ್ತಿಗಳು ಸರ್ವಧರ್ಮ ಸಮ್ಮೇಳನದಲ್ಲಿ ಬ್ರಾಹ್ಮಸಮಾಜವನ್ನು ಪ್ರತಿನಿಧಿಸಿದರು ಕೂಡ. ಇದಲ್ಲದೆ, ಕೊಲ್ಕತ್ತದ ಮಹಾಬೋಧಿ ಸೊಸೈಟಿಯ ಮುಖ್ಯಕಾರ್ಯದರ್ಶಿಯಾದ ಪೂಜ್ಯ ಧರ್ಮಪಾಲ ಅವರೊಂದಿಗೆ ಕೂಡ ಸಮ್ಮೇಳನದ ಸಮಿತಿಯು ಪತ್ರವ್ಯವಹಾರವನ್ನು ಇಟ್ಟುಕೊಂಡಿತ್ತು. ಅವರು ಮುಂದೆ ಸಮ್ಮೇಳನದಲ್ಲಿ ಬೌದ್ಧ ಧರ್ಮವನ್ನು ಪ್ರತಿನಿಧಿಸಿದರು. ಹಾಗೆಯೇ ಮುಂಬೈ ನಗರದ ಜೈನ ಸಮುದಾಯದ ಪ್ರಧಾನ ಗುರುಗಳಾದ ಮುನಿ ಆತ್ಮಾರಾಮಜಿ ಅವರೂ ಸಮಿತಿಯ ಸಂಪರ್ಕದಲ್ಲಿ ಇದ್ದರು.

***(ಮುಂದಿನ ಸಂಚಿಕೆಗೆ)***